**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**
CC No. 1180/2019

CW -1 PW - 1

ಹೆಸರು : ನಾಗಮ್ಮ
ಗಂಡನ ಹೆಸರು : ಭೀಮೇಗೌಡ
ವಯಸ್ಸು : 50 ವರ್ಷ
ಉದ್ಯೋಗ : ವ್ಯವಸಾಯ
ವಾಸ : ಕಂಚನಹಳ್ಳಿ

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ಯವರಿಂದ : ದಿನಾಂಕ 10-10-2023

ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಚಾಸಾ-2 ರಿಂದ 5 ರವರು ಗೊತ್ತು. ಸುಮಾರು ಮೂರುವರೆ ವರ್ಷದ ಹಿಂದೆ ಚಂದ್ರಿಕೆಯನ್ನು ನಮ್ಮ ದಾರಿಯಲ್ಲಿ ನಿಲ್ಲಿಸಿದ್ದೆವು, ಅದನ್ನು ನಮ್ಮ ಗೋಡೆಗೆ ನಿಲ್ಲಿಸಬೇಡಿ ಎಂದುಆರೋಪಿತರು ಹೇಳಿದರು. ಸುಮಾರು 7.30 ಸಮಯದಲ್ಲಿ 1 ನೇ ಆರೋಪಿ ಬಡ್ಡಿ ನಮ್ಮ ಗೋಡೆಗೆ ನಿಲ್ಲಿಸಬೇಡ ಎಂದು ಅವಾಚ್ಯ ಶಬ್ದಗಳಿಂದ ಬೈದು, ದೊಣ್ಣೆ ತೆಗೆದುಕೊಂಡು ಬಂದು ಹೊಡೆಯಲು ಬಂದ. 3 ನೇ ಆರೋಪಿ 1 ನೇ ಆರೋಪಿಗೆ ದೊಣ್ಣೆಯನ್ನು ಕೊಟ್ಟರು. 1 ನೇ ಆರೋಪಿ ದೊಣ್ಣೆಯನ್ನು ತೆಗೆದುಕೊಂಡು ನನಗೆ ಹೊಡೆಯಲು ಬಂದಾಗ ನಾನು ಕೈ ಅಡ್ಡ ಮಾಡಿದ್ದು, ನನ್ನ ಕೈಗೆ ಬಲವಾದ ಏಟು ಆಗಿತ್ತು. ಆಗ 1 ಮತ್ತು 3 ನೇ ಆರೋಪಿಗಳ ಜೊತೆ 2 ನೇ ಆರೋಪಿ ಸಹ ಇದ್ದರು. 2 ನೇ ಆರೋಪಿ ನನ್ನ ತಲೆ ಜುಟ್ಟನ್ನು ಹಿಡಿದು ಎಳೆದಾಡಿದರು.

ಚಾಸಾ-2 ಮತ್ತು 3 ರವರು ಗಲಾಟೆ ಶಬ್ದ ಕೇಳಿ ಸ್ಥಳಕ್ಕೆ ಬಂದು ಜಗಳ ನಿಲ್ಲಿಸಿದರು. ನಂತರ ಅದೇ ದಿನ ನಾನು ಹೋಗಿ ದೂರನ್ನು ಸಲ್ಲಿಸಿದೆನು. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿ ಅದರಲ್ಲಿನ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ.ಸದರಿ ದಾಖಲೆ ದೂರು ಆಗಿದ್ದು ದೂರನ್ನು ನಿಪಿ.1 ಎಂದು ಗುರುತಿಸಲಾಯಿತು.

ಪೋಲೀಸರು ನನ್ನನ್ನು ಅದೇ ದಿನ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕಳುಹಿಸಿದರು. ನಂತರ ಪೋಲೀಸರು ಊರಿಗೆ ಬಂದಿದ್ದರು. ಪೋಲೀಸರು ಸ್ಥಳಕ್ಕೆ ಬಂದಾಗ ನಾನು ದೊಣ್ಣೆಯನ್ನು

ಕೊಟ್ಟಿದ್ದೆನು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೊಣ್ಣೆಯನ್ನು ಮು.ಮ-1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯಾಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲುಗೆ ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)**

ದಿಃ20.07.2019 ರಂದು ಪೋಲೀಸರು ನನ್ನಿಂದ ದೊಣ್ಣೆಯನ್ನು ಅಮಾನತು ಪಡಿಸಿಕೊಂಡು ಮಹಜರ್ ಕ್ರಮ ಜರುಗಿಸಿ ಸ್ಥಳದಲ್ಲಿ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದರು ಎಂದರೆ ಸರಿ. ದಿಃ29.07.2019 ರಂದು ನಾನು ಪೋಲೀಸ್ ಠಾಣೆಗೆ ಹೋಗಿ ಹೇಳಿಕೆಯನ್ನು ನೀಡಿದ್ದೇನೆಂದರೆ ಸರಿ. ಸದರಿ ಮಹಜರ್ ನ್ನು ನಿಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಕೆ ಎನ್ ಜಿ ವಕೀಲರಿಂದಃ**

ಸದರಿ ಮೇಲೆ ಹೇಳಲಾದ ಗಲಾಟೆಯು ಯಾವ ದಿನಾಂಕ, ತಿಂಗಳು ಮತ್ತು ವರ್ಷ ಆಯಿತು ಎಂದು ನನಗೆ ಸರಿಯಾಗಿ ಹೇಳಲು ಸಾಧ್ಯವಿಲ್ಲ. ನಿಪಿ-1 ನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ನಮ್ಮ ಹಾಗೂ ಆರೋಪಿತರ ಮನೆ ಅಕ್ಕಪಕ್ಕದಲ್ಲಿದೆ ಎಂದರೆ ಸರಿ. ನಾನು ಆರೋಪಿತರ ಮನೆಯ ಗೋಡೆಗೆ ಶೀಟ್ ಹಾಕಿಕೊಂಡಿದ್ದೇವೆಂದರೆ ಸರಿ. ಮುಂದುವರಿದು ಸಾಕ್ಷಿ ನನ್ನ ತಾಯಿ ಹಾಗೂ ಅಜ್ಜಿಯ ಕಾಲದಿಂದಲೂ ಹಾಕಿಕೊಂಡಿದ್ದೇವೆಂದು ನುಡಿಯುತ್ತಾರೆ.

ನಾವು ರೇಷ್ಮೆ ಗೂಡು ಬೆಳೆಯುತ್ತೇವೆಂದರೆ ಸರಿ. ನಾವು ರೇಷ್ಮೆ ಚಂದ್ರಿಕೆಗಳನ್ನು ಆರೋಪಿತರ ಗೋಡೆಗೆ ಒರಗಿಸಿ ನಿಲ್ಲಿಸುತ್ತಿದ್ದೆವು ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಪಟ್ಟ ಹಾಗೆ ನಮಗೂ ಆರೋಪಿತರಿಗೂ ಮುಂಚಿನಿಂದಲೂ ವೈಮನಸ್ಸು ಇದೆ ಎಂದರೆ ಸರಿ. ನಿಪಿ-1 ರಲ್ಲಿ ನಾನು ಚಂದ್ರಿಕೆಯನ್ನು ಗೋಡೆಗೆ ನಿಲ್ಲಿಸಿರಲಿಲ್ಲ ಎಂದು ಬರೆಸಿರುವ ಬಗ್ಗೆ ನನಗೆ ನೆನಪಿಲ್ಲ. ನಿಪಿ-1 ರಲ್ಲಿ ನಾನು ಚಂದ್ರಿಕೆಯನ್ನು ದೊಣ್ಣೆ ಸಹಾಯದಿಂದ ಗೋಡೆಗೆ ಒರೆಗಿಸಿ ನಿಲ್ಲಿಸಿದ್ದೆ ಎಂದು ಬರೆಸಿದ್ದೇನೆಂದರೆ ಸರಿ. ನನ್ನ ತಾತನ ಕಾಲದಿಂದಲೂ ಆರೋಪಿತರ ಗೋಡೆಗೆ ಚಂದ್ರಿಕೆಯನ್ನು ಒರೆಗಿಸಿ ಅವರ ಮೇಲೆ ದೌರ್ಜನ್ಯ ಮಾಡುತ್ತಾ ಬಂದಿದ್ದೇವೆಂದರೆ ಸರಿಯಲ್ಲ.

ನಾನು ಗಲಾಟೆಯಾದ ದಿನವೇ ದೂರು ದಾಖಲಿಸಿದ್ದೇನೆ. ನಾನು ಗಲಾಟೆಯಾದ ದಿನ ದೂರು ದಾಖಲಿಸಿಲ್ಲ, ಮಾರನೇ ದಿನ ದಾಖಲಿಸಿದ್ದೇನೆಂದರೆ ಸರಿಯಲ್ಲ. ನನಗೆ ದೊಣ್ಣೆಯಿಂದ

ಹೊಡೆದಿರುತ್ತಾರೆ. ನನಗೆ ಮು.ಮ-1 ರಿಂದ ಹೊಡೆದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಸಿಗದಿರುವ ದೊಣ್ಣೆಯಿಂದ ಹೊಡೆದ ಎಂದು ಹೇಳಿದ್ದೇನೆ, ನ್ಯಾಯಾಲಯದ ಮುಂದಿರುವ ದೊಣ್ಣೆ ಸಿಗದಿರುವ ದೊಣ್ಣೆ ಅಲ್ಲ ಎಂದರೆ ಸಾಕ್ಷಿ ಸ್ಥಳದಲ್ಲಿ ಎರಡೂ ದೊಣ್ಣೆಗಳುಇದ್ದವು, ಯಾವುದನ್ನು ಪೋಲೀಸರಿಗೆ ಕೊಟ್ಟಿದ್ದೇವೆಂದು ನೆನಪಿಲ್ಲ ಎಂದು ನುಡಿಯುತ್ತಾರೆ. ಮು.ಮ-1 ನ್ನು ಪೋಲೀಸರಿಗೆ ನಾನು ಕೊಟ್ಟಿರುವುದಿಲ್ಲ. ಆರೋಪಿತರು ನನಗೆ ಯಾವುದೇ ದೊಣ್ಣೆಯಿಂದ ಹೊಡೆದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮಹಜರ್ ಯಾವ ದಿನಾಂಕ, ತಿಂಗಳು ಮತ್ತು ವರ್ಷದಲ್ಲಿ ಮಾಡಿದರು ಎಂದು ನನಗೆ ನೆನಪಿಲ್ಲ. ಅದರಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಮಹಜರ್ ನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ. ಮಹಜರ್ ಗೆ ಚಾಸಾ-2 ಮತ್ತು 3 ರವರು ಸಹಿ ಮಾಡಿರುತ್ತಾರೆ. ಪೋಲೀಸರು ಸ್ಥಳಕ್ಕೆ ಬಂದಿರಲಿಲ್ಲ, ಯಾವುದೇ ಮಹಜರ್ ಕ್ರಮ ಮಾಡಿರುವುದಿಲ್ಲ ಹಾಗೂ ಚಾಸಾ-2 ಮತ್ತು 3 ರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಹೇಳಿ ಸುಳ್ಳು ಗಾಯದ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿದ್ದೇನೆಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಯಾವ ದಿನಾಂಕ, ತಿಂಗಳು ಮತ್ತು ವರ್ಷ ಹೋಗಿದ್ದೆ ಎಂದು ನನಗೆ ನೆನಪಿಲ್ಲ. ನಾನು ಆರೋಪಿಗಳ ಜಾಗದಲ್ಲಿ ಶೀಟ್ ಹಾಕಿಕೊಂಡಿದ್ದು ಅವರು ಆ ಬಗ್ಗೆ ಪ್ರಶ್ನಿಸದಿರಲಿ ಎಂದು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು ಯಾವ ದಿನಾಂಕ, ತಿಂಗಳು ಮತ್ತು ವರ್ಷ ನನ್ನ ಮರು ಹೇಳಿಕೆ ಪಡೆದರು ಎಂದು ನನಗೆ ನೆನಪಿಲ್ಲ. ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿತರು ಹಾಗೂ ನನ್ನ ನಡುವೆ ಗಲಾಟೆಯಾಗಿಲ್ಲ, ಅವರು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ಹೊಡೆದಿಲ್ಲ, ನಾನು ಗಾಯಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು ಸ್ಥಳಕ್ಕೆ ಬಂದು ಮಹಜರ್ ಜರುಗಿಸಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ